(154) 2

RegdNo B G155

Sri

ಸತ್ಯವಾದಿ

20—8—1965

48th Year.
Satyavadi
DAILY
MYSORE 4.

ಸಂಸ್ಥಾಪಕರು — ಅರಮನೆ ಸಿಂಸ್ಕೇಡಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್ಸು

ಕೇವಲ 15 ದಿನಗಳಲ್ಲಿ ಪುರುಷತ್ವ ನಿಶ್ಯಕ್ತಿಗೆ ಖಾತ್ರಿಯಾದ ಗುಣ : ಯಾವನದಕ್ಕೆಯೆ ಮುಪ್ಪಾದಂತೆ ಭಾವಿಸುವವರು ಮತ್ತೆ ಸಂಸಾರದಲ್ಲಿ ಚಿಗುರಿಸಿ ಹೊಂದಿದವರು ಇಂದೇ ಡಾ || ಮೋತಿಯವರ ಸಲಹೆ ಪಡೆಯಿರಿ.

ಇವರು ನಂಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಾವಸ್ಥೆ, ಸ್ತ್ರೀಯರ ಬಯಕೆ ಸಾಧ್ಯವಾದ ತೊಂದರೆ, ಮತ್ತು ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ನಿವಾರಿಸುವರು.

ಜನತಾ ಡಿಸ್ಪೆನ್ಸರಿ

ಪ್ರತಿ ದಿನವೂ ಸಲಹೆ ಕಾಲ — ಬೆಳಿಗ್ಗೆ 10 ರಿಂದ 1, ಸಂಜೆ 4 ರಿಂದ 8

ಹೆಡ್ ಆಫೀಸ್ :
ಸುಬೇದಾರ್ ಛತ್ರಂ ರೋಡ್
ಬೆಂಗಳೂರು 9 : ಫೋನ್ ನಂಬರ್ 75382.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ಯಾನಿಧಿ
ಸಂಪತ್ಕೃಷ್ಣಜೋಯಿಸರಿಂದ

21 ಶನಿವಾರ ನವಮಿ ರೋಹಿಣಿ
ಸರ್ವತ್ರ ಶ್ರೀಕೃಷ್ಣಜಯಂತಿ

ಕ್ಯಾನ್ಸರ್

ನವದೆಹಲಿ — ಕಾ|| 20 ರಂದು ನಡೆಯಬೇಕಾಗಿದ್ದ ಇಂಡೋ-ಪಾಕ್ ವಿದೇಶಾಂಗ ಮಂತ್ರಿಗಳ ಸಮ್ಮೇಳನವು ವಜಾ ಮಾಡಲಾಗಿದೆ — ಈಚೆಗೆ ಕಾಶ್ಮೀರದಲ್ಲಿ ನಡೆದ ವಿಚಾರಗಳನ್ನು ನೋಡಿದರೆ ಈ ಸಮ್ಮೇಳನದಿಂದ ಯಾವ ಒಪ್ಪಂದಕ್ಕೂ ಅವಕಾಶ ಕಂಡುಬರುವುದಿಲ್ಲವೆಂದು ಭಾರತ ಪಾಕಿಸ್ತಾನಕ್ಕೆ ತಿಳಿಸಿದೆ

ಸಂತೋಷ ಸುದ್ದಿ

ನವದೆಹಲಿ — ನಾಲ್ಕನೇ ಯೋಜನೆಗೆ ಹಣಶೇಖರಿಸಲು ಭೂಕಂದಾಯ ಹೆಚ್ಚಿಸುವುದಾಗಲೀ ಭೂಮಿ ಮೇಲೆ ತೆರಿಗೆ ವಿಧಿಸುವುದಾಗಲೀ ಕೂಡದೆಂದು ಪ್ರಧಾನಿಗಳು ಹೇಳಿರುವರು

ಒಳ್ಳೇ ಉತ್ಪತ್ತಿ

ನವದೆಹಲಿ — 65-66 ರ ಪ್ರಥಮ ಮೂರು ತಿಂಗಳಲ್ಲಿ ಕೇಂದ್ರಕ್ಕೆ 388-88 ರೂಗಳು ಉತ್ಪತ್ತಿಯಾಗಿದೆ

ಷೇಕ್ ಅಬ್ದುಲ್ಲರ ಬೆಂಬಲವೇ

ಲಂಡನ್ — ಷೇಕ್ ಅಬ್ದುಲ್ಲಾ ಎಳೆಹುಡುಗ ತಾಂಕ್ ಅಬ್ದುಲ್ಲರು ಕಾಶ್ಮೀರದ ಧಾಳಿಕಾರರನ್ನು ' ಕಾಶ್ಮೀರಿ ಭಾಗಿಗಳು ' ಎಂದು ಹೇಳಿ ಅವರಿಗೆ ಪೂರ್ಣ ಬೆಂಬಲ ನೀಡಿರುವರು.

Await—

The Big Morinng Daily (English)

ever started in the history ot Mysore

will be shortly at your doors

ಲೋಕಸಭೆಯಲ್ಲಿ ಸಭಾ ಪರಿತ್ಯಾಗ

ನವದೆಹಲಿ — ಕಚ್ ಗಡಿ ವ್ಯಾಜ್ಯದಲ್ಲಿನ ಇಂಡೋ-ಪಾಕ್ ಒಪ್ಪಂದಕ್ಕೆ ಲೋಕಸಭೆಯು ಸಮ್ಮತಿ ಸೂಚಿಸಿತು — ಜನಸಂಘ ಮತ್ತು ಸೋಷಿಯಲಿಸ್ಟ ಸದಸ್ಯರು ಸಭಾಪರಿತ್ಯಾಗ ಮಾಡಿದರು.

ಚೆನ್ನ ವಶ

ಜಯಪುರ — ಚಂದ್ರಾವಾದ್ರಿ ಗ್ರಾಮದಲ್ಲಿ ಒಬ್ಬ ಕೋಟ್ಯಾಧೀಶನ ಮನೆಯನ್ನು ಶೋಧಿಸಿ ಡಿಕ್ಟೇರು ಮಾಡಿದ್ದರೂ 60 ಲಕ್ಷ ಭಂಗಾರ ವಶಪಡಿಸಿಕೊಳ್ಳಲಾಗಿದೆ — 159 ಕಿಲೋ ಭಂಗಾರ 10 ಸಾವಿರಕ್ಕೂ ಹೆಚ್ಚು ಸರ್ಕಾರಗಳು 295 ಬೆಳ್ಳಿ ಗಟ್ಟಿಗಳೂ ಸಿಕ್ಕಿವೆ

ಕೃತಕ ನೋಟುಗಳ ಚಲಾವಣೆ

ಜಯಪುರ — ಉತ್ತರ ಪ್ರದೇಶದ ಪೂರ್ವ ಜಿಲ್ಲೆಗಳಲ್ಲಿ ಚೀನಾದಲ್ಲಿ ವ್ಯವಸ್ಥಿತವಾಗಿ ನೇಪಾಳದ ಮೂಲಕ ಅಕ್ರಮವಾಗಿ ಸಾಗಿಸಲ್ಪಡುತ್ತಿರುವ ಕೃತಕ ಹಣದನೋಟುಗಳು ಹೇರಳವಾಗಿ ಚಲಾವಣೆಗೆ ನುಗ್ಗಿ ಸಂಚಲನಗೊತ್ತಿದೆಯೆಂಬುದು ವಿಧಾನ ಸಭೆಯಲ್ಲಿ ಸದಸ್ಯರೊಬ್ಬರು ಹೇಳಿದರು.

ಥಾಂಟ್ ಅಭಿಪ್ರಾಯ

ನವದೆಹಲಿ — ಕಾಶ್ಮೀರದಲ್ಲಿನ ಧಾಳಿ ವಿಷಯದಲ್ಲಿ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಗಳು ಥಾಂಟರು ತಮ್ಮ ಅಭಿಪ್ರಾಯವನ್ನು ಇಂದೋನಾಳೆಯೇ ಬಹಿರಂಗ ಪಡಿಸಲಿರುವರು — ವಿಶ್ವಸಂಸ್ಥೆಯು ಮಿಲಿಟರಿ ವೀಕ್ಷಕರ ಮುಖಂಡ ಜನರಲ್ ಸಮ್ಮೋ ಪಾಕಿಸ್ತಾನಿಗಳು ಸಾಮೂಹಿಕವಾಗಿ ನುಗ್ಗುತ್ತಿರುವರೆಂದು ಥಾಂಟರಿಗೆ ತಿಳಿಸಿರುವುದಾಗಿ ಪ್ರಕಟವಾಗಿದೆ

ಪ್ರಯತ್ನ ವಿಫಲ

ನವದೆಹಲಿ — ಶ್ರೀನಗರಕ್ಕೆ 19 ಮೈಲಿ ದೂರದಲ್ಲಿ ನತ್ತು ಲಡಕ್ಕಿನ ಮುಖ್ಯ ರಸ್ತೆಯಲ್ಲಿರುವ ಪ್ಯೂಯಿಲ್ ಸೇತುವೆಯನ್ನು ಉಡಾಯಿಸಲು ಪಾಕಿಸ್ತಾನ ಧಾಳಿಕಾರರು ಮಾಡಿದ ಪ್ರಯತ್ನವು ವಿಫಲವಾಯಿತು — ಸೆಂಟ್ರಲ್ ರಿಜರ್ವ್ ಪೋಲೀಸರು ಅವರೊಡನೆ ಹೊಡೆದಾಡಿದರು - ಪಾಕಿಸ್ತಾನಿಗಳು ತಮ್ಮ ಕಡೆ ಸತ್ತವನೊಬ್ಬನನ್ನು ಇನ್ನೊಬ್ಬ ಸತ್ತವನನ್ನು ಎಳೆದು ಕೊಂಡು ಪರಾರಿಯಾದರು ಕೆಲ ಹಗುರ ಮೆಷಿನುಗನ್ನುಗಳನ್ನೂ ಕೈ ಬಾಂಬುಗಳನ್ನೂ ಭಾರತ ಪೋಲೀಸರು ಪಶಪಡಿಸಿಕೊಂಡರು

ಭಾಷೆಯ ವಿಷಯ

ನವದೆಹಲಿ — ಅಧಿಕೃತ ಭಾಷಾ ಶಾಸನ ತಿದ್ದುಪಡಿಯನ್ನು ಈ ಅಧಿವೇಶನದಲ್ಲೇ ಶಾಲಾಗುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ಇನ್ನೂ ಯಾರಿಗೂ ದೊರೆತಿಲ್ಲ

ಬೆಂಗಳೂರು — ಓಲ್ಡ್ ಏಜ್ ಪೆನ್ಷನ್ನನ್ನು ಕಳೆದ ವರ್ಷ ಡಿಸೆಂಬರಿನಿಂದ ಜಾರಿಗೆ ಬಂದಿದ್ದರೂ ಇನ್ನೂ ಯಾರಿಗೂ ಕೊಟ್ಟಿರುವುದಿಲ್ಲ

ಚೀನಾ ಗೂಢಚಾರ

ಮನಲ — ೮೦ ವರ್ಷದ ಕಲಾಂಗ್ ಎಂಬ ಟಿಬೆಟ್ಟಿನವನನ್ನು ಚೀನೀ ಗೂಢಚಾರನೆಂದು ಬಂಧಿಸಲಾಗಿದೆ — ಅವನ ಪತ್ತರ ಕಾಗದಪತ್ರಗಳೂ ಭಾರತದ 14 ಸಾವಿರ ನೋಟುಗಳು ಸಿಕ್ಕಿವೆ

ನೈವೇದ್ಯ ಭುಂಜಿಸಿದ ಗುರುವಾಯೂರಪ್ಪ

—0—

(ಮುಂದುವರಿಯುವುದು)

ಗುರುವಾಯೂರಪ್ಪನ ಲೀಲೆಗಳು ಅಪಾರ ; ಶ್ರೀಕೃಷ್ಣನು ಲೀಲಾಮಯನೆಂಬ ಸತ್ಯಸ್ಥಿತಿಯನ್ನು ಕಲಿಯುಗದಲ್ಲೂ ಪ್ರತ್ಯಕ್ಷಪಡಿಸುವ ದೃಷ್ಟಾಂತಗಳು ಹಲವಾರು ಘಟಿಸಿವೆ ; ಅವೆಲ್ಲವನ್ನೂ ಈ ಲೇಖನದಲ್ಲಿ ಬರೆಯುವುದು ಕಷ್ಟಸಾಧ್ಯವೆಂಬುದರಿಂದ ಮುಗ್ಧಬಾಲಕನ ಶೀಘ್ರಾತೀತ ಭಕ್ತಿಗೆ ಮೆಚ್ಚಿ ನೈವೇದ್ಯವನ್ನು ಭುಂಜಿಸಿದನೆನ್ನುವ ಒಂದು ಲೀಲೆಯನ್ನಿಲ್ಲಿ ಬರೆಯುವ ಪ್ರಯತ್ನವನ್ನು ಕೈಗೊಳ್ಳಲಾಗಿದೆ

ಹಲವು ವರ್ಷಗಳ ಹಿಂದಿನ ಘಟನೆಯಿದು : ನಿರಾಡಂಬರವಾಗಿ ಭಕ್ತಜನರು ಭಕ್ತಿಮಾರ್ಗದಲ್ಲಿ ವರ್ತಿಸುತ್ತಿದ್ದ ಕಾಲವದು : ಕ್ಷೇತ್ರದ ಪೂಜಾರಿಯಾಗಿದ್ದ ನಂಬೂದಿರಿ ಬ್ರಾಹ್ಮಣನು ಉಚ್ಚತಮ ಆದರ್ಶಗಳನ್ನು ಪಾಲಿಸುತ್ತಾ ಗುರುವಾಯೂರಪ್ಪನ ಸೇವೆಯನ್ನು ಕೈಗೊಂಡು ಧನ್ಯರಾಗುತ್ತಿದ್ದರು

ಒಂದು ದಿನ ಅವರಿಗೆ ದೂರದ್ಥಳವೊಂದಲ್ಲಿ ನಡೆಯುವಿರುವ ಶ್ರಾದ್ಧದಲ್ಲಿ ಭಾಗವಹಿಸಬೇಕಾದ ಆಹ್ವಾನವು ಬಂದಿತು ; ಆದರೆ ಗುರುವಾಯೂರಪ್ಪನ ಸೇವೆಗೆ ವ್ಯತ್ಯಯ ಬರುವುದಲ್ಲ ಎಂಬ ಚಿಂತೆ ಅವರನ್ನಾವರಿಸಿತು : ತಕ್ಷಣ ದೈವಪ್ರೇರಣೆಯಿಂದಲೋ ಎಂಬಂತೆ ಅವರಿಗೆ ತನ್ನ ಚಿಕ್ಕ ಬಾಲಕನ ಸ್ಮರಣೆ ಬಂದು ಪೂಜಾಕಾರ್ಯವನ್ನು ಅವನಿಗೊಪ್ಪಿಸುವುದೆಂಬ ನಿಶ್ಚಯಕ್ಕೆ ಬಂದರು ; ಅಂತೆಯೇ ಪುತ್ರನಿಗೆ ಹೇರಬೇಕಾದುದೆಲ್ಲವನ್ನೂ ಹೇಳಿ ಅವರು ಅಲ್ಲಿಂದ ಹೊರಟರು

ಪೂಜಾರಿ ನಂಬೂದಿರಿಯವರ ಮಗನು ತಂದೆಯಂತೆಯೇ ಮಹಾಭಕ್ತನು ; ದೇವರು ಭಕ್ತವತ್ಸಲನೆಂದು ತಂದೆ ಆಗಾಗ್ಗೆ ಬೋಧಿಸುತ್ತಿದ್ದ ನುಡಿ ಅವನ ಮನಸ್ಸಿನಲ್ಲಿ ಅಚ್ಚಳಿಯದೆ ನೆಲಸಿತ್ತು ; ತಂದೆ ತನ್ನ ವೇಲೆ ಹೇರಿದ ಪೂಜಾಕಾರ್ಯದ ನಿಮಿತ್ತ ಸಕಲ ನೈವೇದ್ಯಾದಿ ಪೂಜಾಸಾಮಗ್ರಿಗಳೊಂದಿಗೆ ದೇವಸನ್ನಿಧಿಗೆ ತೆರಳಿ ಭಕ್ತಿಯಿಂದ ಅರ್ಚಿಸಿದನು ; ಸ್ವಾಮಿ ಗರ್ಪಿಸಿದ ನೈವೇದ್ಯವನ್ನು ಸ್ವಾಮಿ ಭುಂಜಿಸುವನೆಂಬುದಾಗಿ ಆ ಮುಗ್ಧ ಬಾಲಕ ತಿಳಿದುಕೊಂಡಿದ್ದ ! ಈ ದಿನ ನೈವೇದ್ಯದ ಸಾಮಗ್ರಿ ಬಾಕಿ ಉಳಿದುದರಿಂದ ಬಾಲಕನಿಗೆ ಅತೀವ ದುಃಖ ಉಂಟಾಯಿತು : ಪಾತ್ರೆಯಂತಃ ನೈವೇದ್ಯ ತೀರ ಅಲ್ಪವಾದುದರಿಂದಲೋ ಏನೋ ಎಂಬ ಶಂಕೆಯಿಂದ ಹುಡುಗ ನೆರೆಮನೆಯ ಬ್ರಾಹ್ಮಣರ ಮನೆಗೆ ಓಡಿಹೋಗಿ ಹಾಲುಜೇನ್ನುಗಳನ್ನು ತೊಂಡು ತಂದಿರಿಸಿದ : ಅದೂ ಸ್ವಾಮಿ ಭುಂಜಿಸಲಿಲ್ಲ !

(ಮುಂದುವರಿಯುವುದು)

Protect the Cow

Help The Gorakshana

ಗೋಸಂರಕ್ಷಣೆಗೆ ಬೆಂಬಲ ನೀಡಿ.

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶುಸಂಗೋಪನೆ, ತಳಿಪಾಲನೆ, ಪಶುವೈದ್ಯ ವಿಚಾರಗಳಿಂದ ತುಂಬಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ ೩೦ ನ್ಯೆಸೆ

ಶ್ರೀ ದ್ವಾರಕಾ ಜಗದ್ಗುರು ಮಹಾಸಂಸ್ಥಾನಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಸಹಾಯಕರು ರೂ 10. ಪೋಷಕರು ರೂ 25 : (ಒಂದು ಸಾರಿವಂತೆ)

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

ವುಡ್‌ಲ್ಯಾಂಡ್ಸ್ 20-8-65 ರಿಂದ
ಅಮೋಘ ಆರಂಭ

ಕಾಬಿಖಾನ್ (ಹಿಂದಿ) **Kabli Khan**

ಅಜಿತ್, ಹೆಲೆನ್, ಮುಖ್ರಿ, ಜಯಂತ್ ಪಾತ್ರವಹಿಸಿರುವ

.... ಅತ್ಯಮೋಘ ಹಿಂದಿ ಚಿತ್ರ ....

ಸಂಗೀತ : ಚಿತ್ರಗುಪ್ತ — [ಪ್ರತಿ ದಿನ 3 ಪ್ರದರ್ಶನಗಳು

ಅಪರೂ— ಯಶಸ್ವಿ 2 ನೇ ವಾರ

ನರಸಾ, ಬಿ. ಎ.

ಪಾತ್ರ— ಭಾನುಮತಿ, ಬಾಲಾಜಿ, ಎಂ ಆರ್ ರಾಧಾ, ತಾಯಿ ನಾಗೇಶ್

ಅಮೋಘ ಕೌಟುಂಬಿಕ ಚಿತ್ರ] [ಪ್ರತಿ ದಿನ 3 ಆಟಗಳು

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಅಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Edited, Printed & Published by Dharma'prachara niratha M S Krishna Rao (Proprietor) at the Satyavadi Press Chamarajapuram, Mysore 4